ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ: 14ನೇ ಡಿಸೆಂಬರ್, 2020

ಕ್ಷಯ ರೋಗ ನಿರ್ಮೂಲನಾ ಕ್ರಮಗಳು

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-

606(815) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಭಾರತ ಸರ್ಕಾರದ ಪ್ರಕಾರ 2025ರ ವೇಳೆಗೆ ಕ್ಷಯ ರೋಗವನ್ನು ಸಂಪೂರ್ಣವಾಗಿ ತೊಡೆದು ಹಾಕಲು ರಾಜ್ಯವು ಸಿದ್ಧವಾಗಿದೆಯೇ; (ಮಾಹಿತಿ ನೀಡುವುದು)

(ಆ) ಗುರಿಯನ್ನು ಸಾಧಿಸಲು ವರ್ಷಕ್ಕೆ ಹತ್ತು ಪ್ರತಿಶತದಷ್ಟು ನಿಯಂತ್ರಣ ಕ್ರಮ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; 2018ರಲ್ಲಿ ರಾಜ್ಯದಲ್ಲಿ ಹಿಂದಿನ ವರ್ಷಕ್ಕಿಂತ ಕೇವಲ ಎರಡು ಪ್ರತಿಶತದಷ್ಟು ನಿಯಂತ್ರಣ ಕೈಗೊಂಡಿದ್ದು ನಿಜವೇ; ಹಾಗಿದ್ದಲ್ಲಿ, ಕಾರಣಗಳ ಸಮೇತ ಅದರ ವಿವರಗಳನ್ನು ಒದಗಿಸುವುದು;

(ಇ) ಟಿ.ಬಿ ಖಾಯಿಲೆ ಪರೀಕ್ಷೆಯಿಂದ ದೃಢಪಟ್ಟಿರುವ ಈ ಖಾಯಿಲೆಯ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎನ್ನುವ ಧೋರಣೆಯನ್ನು ಸರ್ಕಾರ ತಳೆದಿದೆಯೇ;

(ಈ) ಟಿ.ಬಿ. ಪರೀಕ್ಷೆಯಿಂದ ದೃಢಪಟ್ಟಿರುವ ಪ್ರಕರಣಗಳಲ್ಲಿ ರೋಗಿಗಳೊಂದಿಗೆ ಸಂಪರ್ಕದಲ್ಲಿ ಇರುವವರಿಗೆ ಉತ್ತಮ ಚಿಕಿತ್ಸೆ ನೀಡುವ ಬಗ್ಗೆ ಸರ್ಕಾರ ಗಮನ ಹರಿಸುತ್ತಿದೆಯೇ? (ಸಂಪೂರ್ಣ ವಿವರಗಳನ್ನು ನೀಡುವುದು)